ಅಲ್ಲದೇ, ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಾಶಾಇ/38/ಶಾಸನ /2003, ಬೆಂಗಳೂರು ದಿನಾಂಕ 08–03–04ರಂದು ಕರ್ನಾಟಕ ಗ್ರಾಮ ರಕ್ಷಣಾ ದಳಗಳ ಅಧಿನಿಯಮ 1964ನ್ನು ಹಿಂತೆಗೆದುಕೊಂಡಿರುತ್ತದೆ

ಇ) ಉದ್ಭವಿಸುವುದಿಲ್ಲ

832 (1167) ಶ್ರೀ ಆಂಜನೇಯ (ಭರಮಸಾಗರ) ಮಾನ್ಯ ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪೊಲೀಸ್ ಉಪಾಧೀಕ್ಷಕರ (ಡಿವೈಎಸ್‌ಪಿ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಂಖ್ಯೆ ಎಷ್ಟು)

ಆ) ಇನ್ಸ್‌ಪೆಕ್ಟರ್ ಹುದ್ದೆಯಲ್ಲಿ ಉಪಾಧೀಕ್ಷಕರ ಹುದ್ದೆಗೆ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಡ್ತಿ ನೀಡಲಾಗಿದೆ

ಇ) ಪ್ರಸ್ತುತ ಬಡ್ತಿಯ ಜೇಷ್ಠತಾ ಪಟ್ಟಿಯಲ್ಲಿ ವ್ಯತ್ಯಾಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು)

ಉ) ಇವರುಗಳಿಗೆ ಬಡ್ತಿ ನೀಡುವಾಗ ರೋಸ್ಟರ್ ಪದ್ಧತಿ ಅನುಸರಿಸಿ ಬಡ್ತಿ ನೀಡಲಾಗಿದೆಯೇ ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) –

ಅ) ಡಿವೈಎಸ್‌ಪಿ (ಸಿವಿಲ್) ಹುದ್ದೆಗಳ

ಮಂಜೂರಾತಿ ಬಲ	–	283
ಪರಿಶಿಷ್ಟ ಜಾತಿ	–	44
ಪರಿಶಿಷ್ಟ ಪಂಗಡ	–	14

ಆ) ಪಿ ಐ ಹುದ್ದೆಯಂದಿ ಸ್ವತಂತ್ರ ಪ್ರಭಾರ ಡಿವೈಎಸ್‌ಪಿ (ಸಿವಿಲ್) ಹುದ್ದೆಗೆ ನೀಡಿರುವ ಸಂಖ್ಯೆ

1	ಪರಿಶಿಷ್ಟ ಜಾತಿ	–	50
2	ಪರಿಶಿಷ್ಟ ಪಂಗಡ	–	09

ಇ) ಪ್ರಸ್ತುತ ಪಿ ಐ (ಸಿವಿಲ್) ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ

ಈ) ಅನ್ವಯಿಸುವುದಿಲ್ಲ

ಉ) ರೋಸ್ಟರ್ ಅನುಸರಿಸಿ ಸರ್ಕಾರ ಬಡ್ತಿ ನೀಡಿದೆ

ಆದರೆ ಸರ್ಕಾರದ 'ಆದೇಶ ಸಂಖ್ಯೆ ಡಿಪಿಎಆರ್ 21 ಎಸ್‌ಪಿಸಿ 97, ದಿ 3 2 1999ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕ್ರಮವಾಗಿ ಶೇಕಡ 15 ಮತ್ತು ಶೇಕಡ 3 ಪ್ರಾತಿನಿದ್ಯಕ್ಕಿಂತ ಹೆಚ್ಚಾಗಿದ್ದರಿಂದ 17ನೇ ಸೈಕಲ್‌ನಲ್ಲಿ ರೋಸ್ಟರ್ ಸಂಖ್ಯೆ 27, 18ನೇ ಸೈಕಲ್‌ನಲ್ಲಿ ರೋಸ್ಟರ್ ಸಂಖ್ಯೆ 1, 2, 7, 14, 21, 27 ಹಾಗೂ 19ನೇ ಸೈಕಲ್‌ನಲ್ಲಿ ರೋಸ್ಟರ್ ಸಂಖ್ಯೆ 1 ಮತ್ತು 2ರಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ ಸಮಾಜ ಕಲ್ಯಾಣ ಇಲಾಖೆಯು ಈ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಗುರುತಿಸಿದ್ದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ ಒಇ 356 ಪೊಸಿಪ 2003, ದಿ 26 12 2003 ರಲ್ಲಿ 7 ಮಂದಿ ಪರಿಶಿಷ್ಟ ಜಾತಿ ಮತ್ತು 2 ಮಂದಿ ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಸ್ವತಂತ್ರ ಪ್ರಭಾರ ಡಿವೈಎಸ್‌ಪಿ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗಿರುತ್ತದೆ

ಉಳಿದ 5 ಎಸ್ ಸಿ ಮತ್ತು 3 ಎಸ್ ಟಿ ಪಂಗಡದ ಬ್ಯಾಕ್‌ಲಾಗ್ ಹುದ್ದೆ ತುಂಬಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಸೂಕ್ತ ಸ್ಪಷ್ಟೀಕರಣ ಪಡೆದು ಸರ್ಕಾರದ ಮಟ್ಟದಲ್ಲೇ ಕ್ರಮ ಕೈಗೊಳ್ಳಲು ಕೋರಲಾಗಿರುತ್ತಿದೆ

835 (160) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಧಗಿಯಿಂದ ಪ್ರತಿದಿನ ಗ್ರಾಮೀಣ ಪ್ರದೇಶಗಳಲ್ಲಿ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ,

ಆ) ಈಗ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ ಹೆಚ್ಚಿನ ಬಸ್ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?